ತಕ್ಷಣ ಬಿಡುಗಡೆಗಾಗಿ

# ವಿಶ್ವ ಬ್ಯಾಂಕ್

ವಾರ್ತಾ ಬಿಡುಗಡೆ ನಂ. 2005/511/ಎಸ್‌ಎಆರ್

ಸಂಪರ್ಕಕ್ಕಾಗಿ: ದೆಹಲಿ ಯಲ್ಲಿ: ಸುದೀಪ್ ಮಜುಂದಾರ್ (91 11) 2461-7241
ಇಮೇಲ್: smozumder@worldbank.org
ವಾಷಿಂಗ್‌ಟನ್‌ನಲ್ಲಿ: ಬೆಂಜಮಿನ್ ಕ್ರೋ(202) 473-5105
ಇಮೇಲ್: bcrow@worldbank.org

ಭಾರತದಲ್ಲಿ ಜಲನಿರ್ವಹಣೆಯಲ್ಲಿ ವಿಶ್ವ ಬ್ಯಾಂಕ್‌ನ ನೆರವು
ಮಹಾರಾಷ್ಟ್ರ ಜಲವಿಭಾಗ ಅಭಿವೃದ್ಧಿ ಯೋಜನೆ 325 ಮಿಲಿಯನ್ ಯು.ಎಸ್. ಡಾಲರ್ ಸಾಲ ಪಡೆದುಕೋಂಡಿದೆ.

ವಾಷಿಂಗ್ಟನ್, ಜೂನ್ 23, 2005– ವಿಶ್ವಬ್ಯಾಂಕ್ ಇಂದು 325 ಮಿಲಿಯನ್ ಯು. ಎಸ್. ಡಾಲರ್ ಸಾಲಕ್ಕೆ ಭಾರತಸರ್ಕಾರಕ್ಕೆ ಸಮ್ಮತಿಸಿದೆ. ಈನೆರವು ಮಾಹಾರಾಷ್ಟ್ರ ಜಲನಿರ್ವಹಣೆ ಅಭಿವೃದ್ಧಿ ಯೋಜನೆಗ ಸಂಬಂಧಿಂನೆದೆ. ಈ ಯೋಜನೆಯ ಉದ್ದೇಶ ರಾಜ್ಯದ ಬಹುಮುಖ ಯೋಜನೆಗಳನ್ನು ಬಲಪಡಿಸುವುದು, ಅಭಿವೃದ್ಧಿ, ಮತ್ತು ಜಲಸಂಪತ್ತನ್ನು ಸರಿಯಾಗಿ ನಿರ್ವಹಣೆ ಮಾಡುವುದು, ಮತ್ತು ನೀರಾವರಿ ಅಭಿವೃದ್ಧಿ ಸೇವೆ ಕೃಷಿ ಉತ್ಪಾದನೆಯ ಬಲವರ್ಧನೆ.

ಮಹಾರಾಷ್ಟ್ರವು ರಾಷ್ಟ್ರದಲ್ಲೇ ಎರಡನೇ ಅತಿದೊಡ್ಡ ರಾಷ್ಟ್ರವಾಗಿದ್ದು ಹಾಗೂ ಮೂರನೇ (ಹೆಚ್ಚು) ಜನಸಂಖ್ಯೆಯನ್ನು ಹೊಂದಿರುವ ರಾಜ್ಯ, ಸರಿಸುಮಾರು (97 ಮಿಲಿಯನ್) 58% ಜನಸಂಖ್ಯೆ ಹಳ್ಳಿಗಾಡಿನಲ್ಲಿ ನೆಲೆಯೂರಿದೆ ಹಾಗೂ ಅದರಲ್ಲಿ 80% ಜನರು ಕೃಷಿಯನ್ನು ತಮ್ಮ ಜೀವನಕ್ಕಾಗಿ ಅವಲಂಬಿಸಿದ್ದು, ಹಾಗೂ ಬಡತನ 32% ಎಂದು ಅಂದಾಜಿಸಲಗಿದೆ. ನೀರಿನ (ದೊರೆಯುವಿಕೆ) ಸೌಲಭ್ಯ ತುಂಬಾ ಅಸಮತೆಯಿಂದ ಕೂಡಿದ್ದು ಮಳೆ ನೀರು 40 ರಿಂದ 100 ದಿನಗಳು ವರ್ಷದಲ್ಲಿ ಬೀಳುತ್ತದೆ. ಮಹಾರಾಷ್ಟ್ರ ಜಲವಿಭಾಗವು ಹಲವಾರು ಸವಾಲುಗಳನ್ನು ಎದುರಿಸುತ್ತಿದೆ; ವಿಭಾಗದೊಳಗಡೆಯೇ ಹೆಚ್ಚುತ್ತಿರುವ ಸ್ಪರ್ಧೆ, ಹೆಚ್ಚುತ್ತಿರುವ ನಗರ ಕೇಂದ್ರಗಳು ಮತ್ತು ಕೈಗಾರಿಕೆಗಳು, ಕೆಳಮಟ್ಟದ ಕೃಷಿ ನೀರಾವರಿ, ಕೀಳುಮಟ್ಟದ ನೀರಾವರಿ ನಿರ್ವಹಣೆ, ನೀರಾವರಿಸಂಪತ್ತಿನ ಯೋಜನೆಯ ನಿರ್ವಹಣೆಯಲ್ಲಿ ಕೊರತೆ, ನೀರಾವರಿ ಅಭಿವೃದ್ಧಿ ನಿರ್ವಹಣೆ ಮತ್ತು ನೀರಾವರಿ ಉತ್ಪಾದನೆಯು 22% ಪ್ರದೇಶವನ್ನು ನೀರಾವರಿ ಗೊಳಪಡಿಸಲು ಅಂದಾಜಿಸಲಾಗಿದ್ದು ಮತ್ತು ಬೆಳೆಯು ಶೇಕಡಾ 5–20% ಎನ್ನಲಾಗಿದೆ.

ವಿಶ್ವಬ್ಯಾಂಕ್‌ನ ನಿರ್ದೇಶಕರಾದ– ಮೈಕೇಲ್ ಕಾರ್ಟರ್ ಹೇಳುವಂತೆ, "ಈ ಯೋಜನೆಯು ಆರ್ಥಿಕ ಅಭಿವೃದ್ಧಿಯನ್ನು ಸಾದಿಸುವ ಗುರಿಯನ್ನು ಹೊಂದಿದ್ದು ಮತ್ತು ಜಲಾಭಿವೃದ್ಧಿ ಹಾಗೂ ನಿರ್ವಹಣೆಯ ಮುಖಾಂತರ ಬಡತನನಿವಾರಣೆ ಮಾಡುವುದು ಮತ್ತು ಜಲಸಂಪರ್ಕ ಸಾಧಿಸುವುದಾಗಿದೆ." "ಈ ಯೋಜನೆಯಿಂದಾಗಿ ಸಾಮಾನ್ಯ ಆದಾಯ 49% ಗೆಹೆಚ್ಚಿಸುವುದು ಮತ್ತು ಸುಮಾರು 33,610 ಕೃಷಿ ಕುಟುಂಬಗಳು ಕೃಷಿಯನ್ನೇ ಅವಲಂಬಿಸಿರುವುದರಿಂದ ಅಂತಹ ಕುಟುಂಬಗಳನ್ನು ಬಡತನ ರೇಖೆಗಿಂತ ಮೇಲಕ್ಕೆ ತರುವುದಾಗಿದೆ."

ಎಂಡಬ್ಲ್ಯು ಎಸ್‌ಐಪಿ ಮುಂದಿನ ನಾಲ್ಕು ಅಂಶಗಳ ನ್ನೊಳಗೊಂಡಿದೆ:

- ಜಲವಿಭಾಗದ ಸಾಂಸ್ಥಿಕ ಪುನರ್ ನಿರ್ಮಾಣ ಮತ್ತು ಕಟ್ಟಡ ಸಾಮರ್ಥ್ಯ. ಈ ಅಂಗವು ಸಾಂಸ್ಥಿಕ ಸುಧಾರಣೆಯ ಮೇಲೆ ಹೆಚ್ಚು ಬೆಳಕು ಚೆಲ್ಲುವುದು ಮತ್ತು ರಾಜ್ಯದ ಬಹೋಪಯೋಗಿ ಯೋಜನೆಗಳನ್ನು ಬಲಪಡಿಸುವುದು, ಅಭಿವೃದ್ಧಿ ಮತ್ತು ರಾಜ್ಯದ ಜಲ ಸಂಪತ್ತಿನ ನದಿಪಾತ್ರದ ನಿರ್ವಹಣೆ ಮಾಡುವುದು.

- ಜಲಸೇವೆ ಮತ್ತು ನಿರ್ವಹಣೆ. ಈ ವಿಭಾಗವು ನೀರಾವರಿ ಪದ್ಧತಿಯನ್ನು ಬಲಪಡಿಸುವುದು ಮತ್ತು ನೀರಾವರಿ ನಿರ್ವಹಣೆಯಲ್ಲಿ ಗುಣಮಟ್ಟವನ್ನು ಕಾಪಾಡುವುದು, ನೀರಾವರಿ ಯೋಜನಾ ನಿರ್ವಹಣೆಯಲ್ಲಿ ಕೃಷಿಕರ ಪಾತ್ರವನ್ನು ಅಭಿವೃದ್ಧಿಪಡಿಸಿ, ಹಣಕಾಸಿನ ಮರುಪಾವತಿಯನ್ನು ಹೆಚ್ಚುಸುವುದು, ಜಲ ನೀತಿಯನ್ನು ಜಾರಿಗೆ ತಂದು ಕೃಷಿಗೆ ಬೆಂಬಲ ಹೆಚ್ಚಿಸುವುದು. ಇದು ಪುನರ್ ನಿರ್ಮಾಣ ಮತ್ತು 286 ಜಲಯೋಜಿನೆಯನ್ನು 6,70,000 ಹೆಕ್ಟೇರ್ ಭೂಮಿಯನ್ನು ಬಳಕೊಂದಿದ್ದು, 291ಡ್ಯಾಂಗಳ ರಕ್ಷಣೆಗೆ ಒತ್ತುನೀಡಿದ್ದು, ಜಲೋಪಯೋಗಿ ಸಂಘಟನೆಗಳನ್ನು ಬಲಪಡಿಸಲು ಸಹಾಯಮಾಡಿ, ಜಲನಿರ್ವಹಣೆ ಅಭಿವೃದ್ಧಿಯನ್ನು ಸಾಧಿಸಿ, ಕೃಷಿಗೆ ಬೆಂಬಲ ಮಾಡಿ ಮತ್ತು ಅದರ ಜೊತೆಗೆ ಸಾಮಾಜಿಕ ಮತ್ತು ಪರಿಸರ ನಿರ್ವಹಣೆಯನ್ನು ಜಾರಿಮಾಡುವುದಾಗಿದೆ.

- ಸಂಶೋಧನಾ ಚಾಲಕರು. ಈ ವಿಭಾಗವು 4 ಜಲೋಪಯೋಗಿ ಕೇಂದ್ರಗಳನ್ನು ಹೊಂದಿದ್ದು ನಾಲ್ಕು ಕೃಷಿ ನೀರಾವರಿ ಸಂಶೋಧನಾ ಚಾಲಕ ಯೋಜನೆಯನ್ನು ಹೊಂದಿದೆ.

- ಯೋಜನಾ ನಿರ್ವಹಣೆ. ಈ ವಿಭಾಗವು ಕೆಳಗಿನ ಅಂಶಗಳನ್ನು ಬೆಂಬಲಿಸುತ್ತದೆ. (i) ರಾಜ್ಯಮಟ್ಟದ ಯೋಜನೆ ತಯಾರಿಯಲ್ಲಿ ಮತ್ತು ನಿರ್ವಹಣಾ ಘಟಕ (ii) ಮಹಾರಾಷ್ಟ್ರ ಸರ್ಕಾರದ ಮೌಲ್ಯಮಾಪನದಲ್ಲಿ ಬೆಂಬಲ ಮತ್ತು ಸಹಾಯ (iii) ಜಲ ನೀತಿಯ ಬಗ್ಗೆ ಸಂದೇಶವನ್ನು ತಲುಪಿಸುವುದು ಮತ್ತು ಮಹಾರಾಷ್ಟ್ರ ರಾಜ್ಯದ ಜಲನೀತಿ ಮತ್ತು ಸುಧಾರಣಾ ಯೋಜನೆಗೆ ಬೆಂಬಲಿಸುವುದು.

ಎಂಎಸ್‌ಡಬ್ಲ್ಯುಐ ಕೆಲವು ರಾಷ್ಟ್ರೀಯ ಮಟ್ಟದ ಜಲವಿಭಾಗ ನಿರ್ವಹಣೆಯಲ್ಲಿ ತನ್ನದೇ ಆದ ನಿಲುವು ತಾಳಿದೆ. ಒಳಗೊಂಡ ಅಂಶಗಳೆಂದರೆ–ರಾಜ್ಯದಲ್ಲಿ ಜಲೋಪಯೋಗಿ ವಿಭಾಗದಲ್ಲಿ ಆಡಳಿತ ನಿರ್ವಹಣೆ, ಮತ್ತು ಮಹಾರಾಷ್ಟ್ರ ಜಲಸಂಪನ್ಮೂಲ ಕಾನೂನು ಪ್ರಾಧಿಕಾರ ನಾಧಿಸುವುದು. ಆರ್. ಎಸ್. ಪಾಠಕ್, ಹಿರಿಯ ಅಭಿಯಂತಕರು ವಿಶ್ವಬ್ಯಾಂಕ್, ಇವರಪ್ರಕಾರ, "ವಿಶ್ವಬ್ಯಾಂಕ್ ಎರಡು

ವರ್ಷಗಳಿಂದ ಮಹಾರಾಷ್ಟ್ರ ಸರ್ಕಾರದೊಂದಿಗೆ (ಕೆಲಸವನ್ನು) ಕಾರ್ಯ ನಿರ್ವಹಿಸಿದ್ದು ಮುಂಬರುವ ಯೋಜನೆಗಳಾದ ಆಂಧ್ರಪ್ರದೇಶ್, ರಾಜಸ್ಥಾನ್, ಉತ್ತರಪ್ರದೇಶ್ ಮತ್ತು ಬಹು ರಾಜ್ಯ ರಾಷ್ಟ್ರೀಯ ಕೃಷಿ ತಾಂತ್ರಿಕ ಯೋಜನೆಗಳಿಗೆ ಸಹಾಯಕವಾಗಿದೆ.

ಈ ಸಾಲವು, ಅಂತರಾಷ್ಟ್ರೀಯ ಪುನರ್‌ನಿರ್ಮಾಣ ಮತ್ತು ಅಭಿವೃದ್ಧಿಗಾಗಿ (ಐಬಿಆರ್‌ಡಿ), ವಿಶ್ವ ಬ್ಯಾಂಕ್ ಸಾಲಯೋಜನೆಯಿಂದೆ ನೆರವು ಲಭಿಸಿದ್ದು 20 ವರ್ಷಗಳ ಅವಧಿಯೊಂದಿಗೆ 5 ವರ್ಷಗಳ ಹೆಚ್ಚಿನ ಅವಧಿಯೊಂದಿಗೆ ಲಭಿಸಿದೆ.

ಹೆಚ್ಚಿನ ಮಾಹಿತಿಗಾಗಿ ಭಾರತದಲ್ಲಿ ವಿಶ್ವಬ್ಯಾಂಕ್ ಕಾರ್ಯಕ್ರಮಗಳು, ದಯವಿಟ್ಟು ಸಂಪರ್ಕಿಸಿ:

http://www.worldbank.org/in

###